ಶ್ರೀ ಎರ್. ಶ್ರೀಕಂಠಯ್ಯ.—ಜಿಲ್ಲಾಧಿಕಾರಿಗಳು ತಡೆಯಾಜ್ಞೆಯನ್ನು ಕೊಟ್ಟಿದ್ದಾರೆ ಎಂದು ಹೇಳಿದಿರಿ, ಡರ್ಡನ್ನು ಪೂರ್ತಿ ಕಟ್ಟಿದಮೇಲೆ ತಡೆಯಾಜ್ಞೆ ಕೊಟ್ಟರೆ ಏನು ಪ್ರಯೋಜನ ? ಈಗ ಅಲ್ಲಿ ಅವರು ಡರ್ಡನ್ನು ಪೂರ್ತಿ ಕಟ್ಟಿದ್ದಾರೆಂದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ಎ. ಶಂಕರಗೌಡ.—ಅಲ್ಲಿ ಡರ್ಡನ್ನು ಇನ್ನೂ ಪೂರ್ತಿ ಕಟ್ಟಿಲ್ಲ. ಒಂದು ಕಾಂಪೌಂಡ್ ಗೋಡೆಯನು ಕಟ್ಟಿದ್ದಾರೆ. ಡರ್ಡನ ಕೆಲಸ ಪ್ರಾರಂಭವಾಗಿದ್ದು ಈಗ ಅವಕ್ಕೆ ಜಿಲ್ಲಾಧಿಕಾರಿಗಳಿಂದ ತಡೆಯಾಜ್ಞೆಯನ್ನು ಕೊಟ್ಟಿದೆ.

ಶ್ರೀ ಎಚ್. ಎನ್. ನಂಜೇಗೌಡ.—ದರ್ಬಾರ್ ಹಾಲನಲ್ಲಿ ಒಂದು ಗೋಡೆಯನ್ನು ಕಟ್ಟಿ ಅದರ ಮೇಲೆ ಒಂದು ಶಿಲುಬೆಯನ್ನು ಇಟ್ಟಿಲ್ಲವೇ ?

ಶ್ರೀ ಕೆ. ಎ. ಶಂಕರಗೌಡ.—ಒಂದು ಕಾಂಪೌಂಡ್ ಗೋಡೆ ಕಟ್ಟಿ ಅದರಮೇಲೆ ಶಿಲುಬೆಯನ್ನು ಇಟ್ಟಿದ್ದಾರೆ.

ಶ್ರೀ ಎಂ. ಎಸ್. ಕೃಷ್ಣನ್.—ಶಿವಪ್ಪನಾಯಕರ ಅರಮನೆ ಇರುವ ಜಾಗ ಪ್ರೊಟೆಕ್ಟೆಡ್ ಏರಿಯಾ ಎಂದು ತಾವು ಒಪ್ಪಿಕೊಂಡಿದ್ದೀರಿ. ಈಗ ಆ ಜಾಗ ಡರ್ಡಿಗೆ ಸೇರಿದ್ದರೆ ನಾವು ಏನೂ ಮಾಡುವುದಕ್ಕಾಗುವುದಿಲ್ಲ ಎಂದು ಹೇಳಿದಿರಿ, ಅದು ಪ್ರೊಟೆಕ್ಟೆಡ್ ಏರಿಯಾ ಎಂದಮೇಲೆ ಅದನ್ನು ರಕ್ಷಣೆ ಮಾಡುವ ಜವಾಬ್ದಾರಿ ಸರ್ಕಾರದ ಮೇಲೆ ಇಲ್ಲವೇ ? ಅದ್ದರಿಂದ ಡರ್ಡನ್ನು ಕಟ್ಟುವುದಕ್ಕೆ ಬೇರೆ ಕಡೆ ಏತಕ್ಕೆ ಜಾಗ ಕೊಡುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡಬಾರದು ?

ಶ್ರೀ ಕೆ. ಎ. ಶಂಕರಗೌಡ.—ಪ್ರೊಟೆಕ್ಟೆಡ್ ಏರಿಯಾದಲ್ಲಿ ಬೇಕಾದಷ್ಟು ಜಾಗಗಳು ಇರುತ್ತವೆ. ಈಗ ಆ ಜಾಗ ಯಾರಿಗೆ ಸೇರಿದೆ ಎಂಬುದು ನಿರ್ಧಾರವಾದ ಮೇರೆ ಒಂದು ವೇಳೆ ಆ ಜಾಗ ಡರ್ಡಿಗೆ ಸೇರಿದ್ದರೆ ಅದನ್ನು ತೆಗೆದುಹಾಕುವುದಕ್ಕೆ ಬರುವುದಿಲ್ಲ.

ಶ್ರೀ ಎಚ್. ಎನ್. ನಂಜೇಗೌಡ.—ಈಗ ತಾವು ಹೇಳಿದಿರಿ, ಅಲ್ಲಿ ಅವರು ಒಂದು ಗೋಡೆಯನ್ನು ಕಟ್ಟಿದ್ದಾರೆ ಎಂದು. ಅವರು ಆ ಗೋಡೆಯನ್ನು ಏತಕ್ಕೋಸ್ಕರ ಕಟ್ಟಿಡ್ದಾರೆ. ಅವರು ಅದನ್ನು ಕಟ್ಟುವುದಕ್ಕೆ ರೈಸೆನ್ಸ್ ತೆಗೆದುಕೊಂಡಿದ್ದಾರೆಯೇ, ಅಲ್ಲಿ ಈ ಕಾನ್‌ಫ್ಲಿಕ್ಟ್ ಏತಕ್ಕೆ ಹುಟ್ಟಿದೆ ಎಂಬುದನ್ನು ತಿಳಿಸುತ್ತೀರಾ ?

ಶ್ರೀ ಕೆ. ಎ. ಶಂಕರಗೌಡ.—ಅಲ್ಲಿ ಅವರು ಒಂದು ಕಾಂಪೌಂಡ್ ಗೋಡೆಯನ್ನು ಕಟ್ಟಿಕೊಂಡಿದ್ದಾರೆ, ಎನ್‌ಕ್ರೋಚ್ ಮಾಡಿದ್ದಾರೆ, ಅವರು ಅಲ್ಲಿ ಆ ಗೋಡೆಯನ್ನು ಕಟ್ಟುವುದಕ್ಕೆ ಪರ್ಮಿಷನ್ ತೆಗೆದುಕೊಂಡಿಲ್ಲ.

Atchkat under Madagadakere and Iyanakere tanks

407. Sri K. M. THAMMAIAH (Kadur).—

Will the Minister for Public Works be pleased to state :—

(*a*) the extent of atchkat under Madagadakere and Iyanakere tanks in Kadur Taluk;

(*b*) the extent of atchkat under cultivation under the said tanks ;

(*c*) the extent of land that is being unauthorisedly cultivated under the said tanks ;

(*d*) whether they have received any representations to increase the capacity of the above tanks ;

(e) if so, the action they h ave taken in the matter ?

A.—Sri ALUR HANUMANTHAPPA (Deputy Minister for Minor Irrigation).—

		A.	G.
(*a*) (i) Madaga tank	...	5,033	35
(ii) Iyyanakere tank	...	3,425	13
(*b*) Do			
		A.	G.
(*c*) (i) Madaga tank	...	172	20
(ii) Iyyanakere tank	...	150	00

(*d*) Yes.

(e) The matter is nnder investigation.

ಶ್ರೀ ಕೆ. ಎಂ. ತಮ್ಮಯ್ಯ.—ಸ್ವಾಮಿ, ಮಡಗದ ಕೆರೆ ಕೆಳಗೆ 5,033 ಎಕರೆ 35 ಗುಂಟೆ ಅಚ್ಚು ಕಟ್ಟಿನ ಏಸ್ತೀರ್ಣವಾಗುತ್ತದೆ ಎಂದು ಹೇಳಿದ್ದೀರಿ, ಅಲ್ಲಿ 6 ಅಡಿಯವರೆಗೂ ನೀರು ನಿಂತಿರುವುದರಿಂದ ಅಷ್ಟೊಂದು ನೀರನ್ನು ಕೊಡುವುದಕ್ಕೆ ಸಾಧ್ಯವಿಲ್ಲ ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ?

† ಶ್ರೀ ಆಲೂರು ಹನುಮಂತಪ್ಪ.—ಅದನ್ನು ಇನ್ನೂ ಸರ್ವೆ ಮಾಡುವುದಕ್ಕೆ ಸಾಧ್ಯವಾಗಿಲ್ಲ. ಆ ಕೆರೆಯ ಕೈಪಾಸಿಟಿ ಎಷ್ಟಿದೆ, ಈಗ ಎಷ್ಟು ನೀರು ನಿಲ್ಲುತ್ತಿದೆ, ಎಷ್ಟು ಹೆಚ್ಚು ಮಾಡಬಹುದು ಎಂಬುದನ್ನು ಸರ್ವೆ ಮಾಡಿದ ಮೇಲೆ ಗೊತ್ತಾಗುತ್ತದೆ.

ಶ್ರೀ ಕೆ. ಎಂ. ತಮ್ಮಯ್ಯ.—ಆ ಕೆರೆಯ ಕೆಳಗೆ 172 ಎಕರೆ 20 ಗುಂಟೆ ಅನಧಿಕೃತವಾಗಿ ಸಾಗುವಳಿ ಆಗುತ್ತಿದೆ ಎಂದು ಹೇಳಿದ್ದೀರಿ, ಅಲ್ಲಿ ನೀರು ಇಲ್ಲದೆ ಇರುವಾಗ 172 ಎಕರೆ ಜಮೀನಿಗೆ ಪ್ರಭಾವಶಾಲಿಗಳಾದವರಿಗೆ ಅಧಿಕಾರಿಗಳು ಷರೀಕಾಗಿ ನೀರನ್ನು ಕೊಟ್ಟಿದ್ದಾರೆ, ಅಂಥಾ ಅಧಿಕಾರಿಗಳ ಮೇಲೆ ಏನೂ ಕ್ರಮ ತೆಗೆದುಕೊಂಡಿಲ್ಲ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಆಲೂರು ಹನುಮಂತಪ್ಪ.—ರೆವಿನ್ಯೂ ಇಲಾಖೆಯವರು ಟಿ. ಟಿ. ಹಾಕತಕ್ಕಂಥ ಕ್ರಮವನ್ನು ಅನುಸರಿಸಿದ್ದಾರೆ. ಇನ್ನೂ ಅಲ್ಲಿಂದ ರಿಪೋರ್ಟು ಬಂದಿಲ್ಲ. ಆ ಕೆರೆಯ ಕೈಪಾಸಿಟಿ ಎಷ್ಟು ಎಂಬುದು ಸರ್ವೆ ಆಗುತ್ತಿದೆ. ಅಲ್ಲಿ ಎಷ್ಟು ನೀರು ಸಿಕ್ಕುತ್ತದೆಯೇ ಅಥವಾ ಇಲ್ಲವೇ ಎಂಬುದರ ಮೇಲೆ ಡಿಪೆಂಡಾಗುತ್ತದೆ.

ಶ್ರೀ ಕೆ. ಎಂ. ತಮ್ಮಯ್ಯ.—172 ಎಕರೆ ಜಮೀನಿಗೆ ನೀರು ಬಿಡುವುದಕ್ಕೆ ಅಧಿಕಾರಿಗಳು ತೂಬು ಇಟ್ಟುಕೊಟ್ಟಿದ್ದಾರೆ, ಮಡಬಾಯಿ ಮಾಡಿಕೊಟ್ಟಿದ್ದಾರೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?

Sri ALUR HANUMANTHAPPA.—If it is done, it is not authorised cultivation.

Sri M. MALLAPPA.—Has it come to the notice of the Government that the original capacity of the tank has been reduced due to the silting of both the tanks for the last ten years?

Sri ALUR HANUMANTHAPPA.—To some extent, silt has deposited. Now a detailed survey has been taken because the tanks dry up due to want of rains for the last one or two years. After the completion of the survey, it can be known how much capacity has been reduced.

ಉಪಾಧ್ಯಕ್ಷರು.—554ನೇ ಪ್ರಶ್ನೆಯನ್ನು ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್ ಅವರು ಹಾಕಬಹುದು.